The Hindu (Bengaluru) 8 September, 2017

# Karnataka leads in manufacturing excellence: Study

SPECIAL CORRESPONDENT
BENGALURU

Karnataka, which houses the country's technology hub of Bengaluru, has emerged on top in manufacturing excellence, according to a study by the Associated Chambers of Commerce and Industry of India (Assocham).

"Karnataka has the best manufacturing process ratio of 2.63 with maximum value of goods being converted into finished goods," according to the study titled 'Manufacturing Excellence and Emergence in India'.

Maharashtra, with a ratio of 1.20, topped in terms of pacts signed by micro, small and medium enterprises at district industrial centres during 2014-2015.

The trade body's economic research bureau took into consideration parameters such as the number of factories, output value, working capital, net fixed capital formation among others to arrive at the performance of States.

While development process in other nations followed a transition from agriculture to manufacturing and then toward the service sector, India's growth has been led by the services sector and 'there have always been concerns about the sustainability of such a growth', the study stated.

Poor product quality, infrastructural bottlenecks and inadequate efforts at research and development have collectively taken a toll on the country's manufacturing competitiveness, according to the study.

"At the same time, private investors must be held accountable and penalised if projects get stuck due to improper planning, change of ownership, lack of finance and other related issues."

Rajasthan Patrika (Bengaluru) 8 September, 2017

एसोचैम की रिपोर्ट

# विनिर्माण में राज्य पहले स्थान पर

पत्रिका न्यूज़ नेटवर्क
rajasthanpatrika.com




बेंगलूरु . भारतीय वाणिज्य एवं उद्योग मंडल (एसोचैम) की ओर से जारी सर्वेक्षण रिपोर्ट के मुताबिक विनिर्माण के क्षेत्र में कर्नाटक देश में पहले स्थान पर है। मंडल के महासचिव डीएस रावत ने गुरुवार को यह जानकारी देते हुए कहा कि हाल में देश के प्रमुख राज्यों में किए गए सर्वेक्षण में विनिर्माण क्षेत्र में कर्नाटक का 2.63 प्रोसेस रेशो सबसे अधिक है। इस राष्ट्रव्यापी सर्वे की रिपोर्ट के मुताबिक 1.29 प्रोसेस रेशो के साथ सूक्ष्म तथा लघु उद्यम क्षेत्र में महाराष्ट्र पहले स्थान पर है। लघु उद्यमियों को कम ब्याज पर ऋण उपलब्धि की श्रेणी में कर्नाटक को देश में तीसरा स्थान प्राप्त है।

उन्होंने कहा कि रिपोर्ट के मुताबिक कर्नाटक में बुनियादी सुविधाएं तथा कुशल मानव संसाधनों के साथ ही विपुल मात्रा में खनिज संपदा होने से यहां के विनिर्माण क्षेत्र में अच्छी वृद्धि हो रही है।

सूची में केरल दूसरे तथा तमिलनाडु तीसरे स्थान पर है। विनिर्माण के क्षेत्र को बांग्लादेश, चीन, इंडोनेशिया, कोरिया, सिंगापुर तथा ताइवान जैसे देशों से चुनौती मिल रही है। इन देशों के उत्पाद सस्ते होने के कारण देश का विनिर्माण क्षेत्र चरमरा रहा है। होड़ में बने रहने के लिए देश के विनिर्माण क्षेत्र को विशेष प्रोत्साहन की दरकार है। विनिर्माण में वृद्धि से ही देश के सकल घरेलू उत्पाद (जीडीपी) की दर बढ़ना संभव है।

रिपोर्ट के मुताबिक देश में विनिर्माण क्षेत्र के मौजूदा हालात संतोषजनक नहीं हैं। इनमें सुधार के लिए केंद्र तथा राज्य सरकारों को विनिर्माण क्षेत्र पर अधिक ध्यान देने की आवश्यकता है। रिपोर्ट के मुताबिक रीयल एस्टेट खनन तथा ऊर्जा विभाग की हालत सबसे खराब है। इस स्थिति से उबरने के लिए केंद्र तथा राज्य सरकारों को ग्रामीण क्षेत्रों की वित्त व्यवस्था सुधारने पर ध्यान देना होगा। ग्रामीण क्षेत्रों में रोजगार के सृजन से विनिर्माण क्षेत्र की मांग बढ़ेगी और निवेशक भी निवेश के लिए आगे आएंगे। तब विनिर्माण क्षेत्र का विकास होगा।

उन्होंने कहा कि देश के ग्रामीण क्षेत्र की 70 फीसदी आबादी आज भी कृषि पर निर्भर है। लेकिन कृषि घाटे का सौदा होने से ग्रामीणों की खरीदी क्षमता नहीं बढ़ रही है। मांग बढ़ाने के लिए ग्रामीणों की वित्तीय स्थिति में सुधार लाना होगा। विनिर्माण के क्षेत्र में अपेक्षित निवेश भी नहीं हो रहा है। अभी हम केवल अपनी क्षमता का 70 फीसदी उपयोग कर रहे हैं। यह उपयोग 85 फीसदी तक बढ़ाने के लक्ष्य को लेकर हमें कार्य करना होगा। तभी उत्पाद क्षेत्र के निवेश में वृद्धि संभव होगी। केंद्र तथा राज्य सरकारें बुनियादी ढांचे के विकास के लिए बड़े पैमाने पर राशि खर्च कर रही हैं।

एक सवाल के जवाब में उन्होंने कहा कि इसके अलावा स्वास्थ्य, शिक्षा, खाद्य प्रसंस्करण तथा ऑटो मोबाइल क्षेत्र में बड़े पैमाने पर निवेश की आवश्यकता है। मेडिकल पर्यटन पर विशेष ध्यान दिया जा रहा है लेकिन अन्य देशों की तुलना में अब हमारे देश में भी चिकित्सा का खर्च लगभग बराबर होने से विदेश के लोग चिकित्सा के लिए यहां नहीं आ रहे हैं। पर्यटन के क्षेत्र में देशी पर्यटकों पर अधिक ध्यान देना चाहिए क्योंकि विदेशी पर्यटकों से उनकी संख्या कई गुणा अधिक है। कर्नाटक एसोचैम इकाई के काउंसिल डेवलपमेंट चेयरमैन आर. शिवकुमार ने कहा कि कर्नाटक में विनिर्माण के क्षेत्र के हालात बदतर होते जा रहे हैं। इन्हें सुधारने के लिए राज्य के लघु उद्यमियों को विदेशी निवेशकों की तर्ज पर सुविधाएं मिलनी चाहिए।

Vihayavani (Bengaluru) 8 September, 2017

ವಿಜಯವಾಣಿ

# ಉತ್ಪಾದನೆಯಲ್ಲಿ ರಾಜ್ಯಕ್ಕೆ 3ನೇ ಸ್ಥಾನ

## 2.63 ಉತ್ಪಾದನಾ ಪ್ರಮಾಣ » ಅಸೋಚಮ್‌ನಿಂದ ಉತ್ಪಾದನಾ ಕ್ಷೇತ್ರದ ಅಧ್ಯಯನ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಉತ್ಪಾದನಾ ಕ್ಷೇತ್ರದಲ್ಲಿ ಕರ್ನಾಟಕ ಹೆಚ್ಚು ಪ್ರಗತಿ ಸಾಧಿಸುತ್ತಿದ್ದು, ದೇಶದಲ್ಲೇ 3ನೇ ಸ್ಥಾನ ಪಡೆದಿದೆ.

ಅಸೋಚಮ್ (ಭಾರತೀಯ ವಾಣಿಜ್ಯ ಹಾಗೂ ಕೈಗಾರಿಕೆ ಮಹಾಮಂಡಲಗಳ ಒಕ್ಕೂಟ) ಕರ್ನಾಟಕ ಪ್ರಾದೇಶಿಕ ಮಂಡಳಿ ಈ ಕುರಿತು ವಿಸ್ತೃತ ವರದಿ ತಯಾರಿಸಿದ್ದು, ರಾಜ್ಯದಲ್ಲಿನ ಉತ್ಪಾದನಾ ಪ್ರಮಾಣ 2.63 ಇದ್ದು, ದೇಶದಲ್ಲಿ ರಾಜ್ಯಕ್ಕೆ 3ನೇ ಸ್ಥಾನ ಲಭಿಸಿರುವುದಾಗಿ ವರದಿ ಹೇಳಿದೆ.

**» ದೇಶದ ಒಟ್ಟು ಹೂಡಿಕೆಯಲ್ಲಿ ಶೇ.6.3 ಭಾಗ ರಾಜ್ಯದಲ್ಲಿ ಹೂಡಿಕೆ**

ರಾಜ್ಯಮಟ್ಟದ ಉತ್ಪಾದನಾ ಶ್ರೇಷ್ಠತೆ ಹಾಗೂ ಎಮರ್ಜೆನ್ಸ್ ಇನ್ ಇಂಡಿಯಾ- ವಿಶ್ಲೇಷಣೆಯ ಸಂಕ್ಷಿಪ್ತ ವರದಿಯನ್ನು ಅಸೋಚಮ್ ಕರ್ನಾಟಕ ವಿಭಾಗದ ಅಧ್ಯಕ್ಷ ಆರ್. ಶಿವಕುಮಾರ್ ಹಾಗೂ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಿ.ಎಸ್. ರಾವತ್ ನಗರದಲ್ಲಿ ಬಿಡುಗಡೆ ಮಾಡಿದರು.

ಅಸೋಚಮ್ ನಡೆಸಿದ ಸಮೀಕ್ಷಾ ವರದಿಯಲ್ಲಿ, ರಾಜ್ಯ ಅಂದಾಜು 2 ಸಾವಿರ ಕೋಟಿ ರೂ. ಮೌಲ್ಯದ ಕಚ್ಚಾ ವಸ್ತುಗಳನ್ನು ಸಿದ್ಧವಸ್ತುಗಳನ್ನಾಗಿ ಮಾರ್ಪಾಡು ಮಾಡುತ್ತಿದೆ. ಕಳೆದ ಹಣಕಾಸು ವರ್ಷದಲ್ಲಿ ರಾಜ್ಯದಲ್ಲಿ 10.7 ಲಕ್ಷ ಕೋಟಿ ರೂ. ಹೂಡಿಕೆಯಾಗಿದೆ. ದೇಶದಲ್ಲಿ 169 ಲಕ್ಷ ಕೋಟಿ ರೂ. ಒಟ್ಟಾರೆ ಹೂಡಿಕೆಯಲ್ಲಿ ಶೇ. 6.3 ರಾಜ್ಯದಲ್ಲೇ ಹೂಡಿಕೆ ಆಗಿರುವುದು ಅಧ್ಯಯನದಿಂದ ತಿಳಿದುಬಂದಿದೆ.

ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ವರ್ಗದ ಉತ್ಪಾದನಾ ವಲಯದಲ್ಲಿ ಮಹಾರಾಷ್ಟ್ರ ಮೊದಲ ಸ್ಥಾನದಲ್ಲಿದ್ದು (ಶೇ.12.8), ಅತಿ ಹೆಚ್ಚು ಪ್ರಮಾಣದಲ್ಲಿ ಹೂಡಿಕೆಗೆ ಅವಕಾಶ ನೀಡಿದೆ. ಒಡಿಶಾ ಎರಡನೇ ಸ್ಥಾನದಲ್ಲಿದ್ದು, ದೇಶದ ಒಟ್ಟು ಹೂಡಿಕೆಯ ಶೇ. 12.7 ಪ್ರಮಾಣದ ಹೂಡಿಕೆಗೆ ಅವಕಾಶ ನೀಡಿರುವುದಾಗಿ ವರದಿ ಹೇಳಿದೆ. ರಾಜ್ಯದಲ್ಲಿ ಲೋಹ ಹಾಗೂ ಲೋಹದ ಉತ್ಪನ್ನ ವಿಭಾಗಕ್ಕೆ ಹೆಚ್ಚಿನ ಹೂಡಿಕೆ (ಶೇ.68) ಆಗಿದ್ದು, ನಿರ್ಮಾಣ ಕಾಮಗಾರಿಗೆ ಅಗತ್ಯವಾದ ವಸ್ತುಗಳ ಉತ್ಪಾದನೆಯ ವಲಯಕ್ಕೆ ಶೇ.10 ಹೂಡಿಕೆಯಾಗಿರುವುದು ತಿಳಿದುಬಂದಿದೆ.

ರಾಜ್ಯದಲ್ಲಿ ಆಗಿರುವ ಹೂಡಿಕೆಯ ಬಗ್ಗೆ ನೈಜ ಚಿತ್ರಣ ತಿಳಿಯುವ ಉದ್ದೇಶದೊಂದಿಗೆ ಅಧ್ಯಯನ ಮಾಡಲಾಗುತ್ತಿದ್ದು, ಮುಂದಿನ ವಾರದಲ್ಲಿ ಸಂಪೂರ್ಣ ವಿಶ್ಲೇಷಣಾತ್ಮಕ ವರದಿ ಬಿಡುಗಡೆ ಮಾಡಲಾಗುತ್ತದೆ ಎಂದು ಶಿವಕುಮಾರ್ ಹೇಳಿದರು.



ರಾಜ್ಯಮಟ್ಟದ ಉತ್ಪಾದನಾ ಶ್ರೇಷ್ಠತೆ ಹಾಗೂ ಎಮರ್ಜೆನ್ಸ್ ಇನ್ ಇಂಡಿಯಾ- ವಿಶ್ಲೇಷಣೆಯ ಸಂಕ್ಷಿಪ್ತ ವರದಿ ಬಿಡುಗಡೆ ಮಾಡಲಾಯಿತು.

### ಹೂಡಿಕೆಯಾಗಿರುವ ಪ್ರಮುಖ ವಲಯ

| ವಲಯ | ಪ್ರಮಾಣ (ಶೇಕಡ) |
|---|---|
| ಲೋಹ ಹಾಗೂ ಲೋಹಗಳ ಉತ್ಪನ್ನ | 68 |
| ನಿರ್ಮಾಣ ಕಾಮಗಾರಿ ವಸ್ತುಗಳು | 10 |
| ರಾಸಾಯನಿಕ ಮತ್ತು ಉತ್ಪನ್ನಗಳು | 8 |
| ಯಂತ್ರೋಪಕರಣ | 4 |
| ಆಹಾರ ಮತ್ತು ಕೃಷಿ | 3.5 |
| ಸಾರಿಗೆ ಉಪಕರಣಗಳು | 3.4 |

### ಅಧ್ಯಯನದಿಂದ ತಿಳಿದ ಅಂಶಗಳು

- ಸರ್ಕಾರಗಳು ಉತ್ಪಾದನಾ ವಲಯದಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು ಕ್ರಮ ಕೈಗೊಳ್ಳಬೇಕು.
- ಕೈಗಾರಿಕಾ ವಲಯಕ್ಕೆ ಮೂಲಸೌಕರ್ಯ ಕಲ್ಪಿಸಲು ಅಗತ್ಯ ಸಹಕಾರ ನೀಡುವುದು.
- ಸಂಶೋಧನೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ವಲಯಕ್ಕೆ ಹೆಚ್ಚು ಉತ್ತೇಜನ ನೀಡುವುದು.
- ಕ್ರಮಬದ್ಧ ಯೋಜನೆ ಇಲ್ಲದ ಹೂಡಿಕೆ, ಯೋಜನೆಗಳಿಗೆ ಅವಕಾಶ ನೀಡದೇ ಇರುವುದು.
- ಕ್ರಮಬದ್ಧವಾಗಿಲ್ಲದ ಹೂಡಿಕೆಯಿಂದ ಆಗುವ ತೊಂದರೆಗಳಿಗೆ ಸರ್ಕಾರಗಳು ದಂಡ ವಿಧಿಸುವುದು.

Vijaya Karnataka (Bengaluru) 8 September, 2017

## ಆಸೋಚಾಮ್ ಅಧ್ಯಯನ ವರದಿ ಬಹಿರಂಗ

# ಉತ್ಪಾದನಾ ಕ್ಷೇತ್ರದ ಹೂಡಿಕೆ: ರಾಜ್ಯ ನಂ. 1

■ **ವಿಕ ಸುದ್ದಿಲೋಕ** ಬೆಂಗಳೂರು

ಉತ್ಪಾದನಾ ಕ್ಷೇತ್ರದ ಹೂಡಿಕೆ ಅವಕಾಶಗಳಲ್ಲಿ ಕರ್ನಾಟಕವು ಪ್ರಥಮ ಸ್ಥಾನಕ್ಕೇರಿದೆ. ಹಾಗೆಯೇ, ಉತ್ಪಾದನಾ ಕ್ಷೇತ್ರದಲ್ಲಿ ಹೆಚ್ಚು ಹೂಡಿಕೆ ಪಡೆದ ರಾಜ್ಯಗಳ ಪೈಕಿ ಮೂರನೇ ಸ್ಥಾನದಲ್ಲಿದೆ ಎಂದು ಅಸೋಚಾಮ್‌ನ ಅಧ್ಯಯನ ವರದಿ ತಿಳಿಸಿದೆ.

ಅಸೋಚಾಮ್ ಸಂಸ್ಥೆಯು 'ಮ್ಯಾನ್ಯುಫ್ಯಾಕ್ಚರಿಂಗ್ ಎಕ್ಸಲೆನ್ಸ್ ಆ್ಯಂಡ್ ಎಮರ್ಜೆನ್ಸ್ ಇನ್ ಇಂಡಿಯಾ' ರಾಜ್ಯ ಮಟ್ಟದ ವಿಶ್ಲೇಷಣಾ ಅಧ್ಯಯನ ವರದಿ ಪ್ರಕಟಿಸಿದ್ದು, ಉತ್ಪಾದನಾ ವಲಯದಲ್ಲಿ ಕರ್ನಾಟಕ ಉತ್ತಮ ಪ್ರಗತಿ ಸಾಧಿಸಿದೆ ಎಂದು ವರದಿಯಲ್ಲಿದೆ.

ನಗರದಲ್ಲಿ ಗುರುವಾರ ಅಧ್ಯಯನ ವರದಿ ಬಿಡುಗಡೆಗೊಳಿಸಿದ ಅಸೋಚಾಮ್‌ನ ಮಹಾ ಕಾರ್ಯದರ್ಶಿ ಡಿ.ಎಸ್.ರಾವತ್, ''ಕರ್ನಾಟಕವು ಕಳೆದ ಆರ್ಥಿಕ ವರ್ಷದಲ್ಲಿ 2000 ಕೋಟಿ ರೂ. ಮೌಲ್ಯದ ಸರಕುಗಳನ್ನು ಸಿದ್ಧಪಡಿಸಿದ ಉತ್ಪನ್ನಗಳಾಗಿ ರೂಪಿಸುವ ಮೂಲಕ 2.63ರಷ್ಟು ಉತ್ಪಾದನಾ ಪ್ರಕ್ರಿಯೆ ಅನುಪಾತ ಕಾಯ್ದುಕೊಂಡಿದೆ. ಜತೆಗೆ ಕಳೆದ ವರ್ಷ ದೇಶಾದ್ಯಂತ 169 ಲಕ್ಷ ಕೋಟಿ ರೂ. ಹೂಡಿಕೆ ಆಕರ್ಷಿಸಲಾಗಿದ್ದು, ಈ ಪೈಕಿ ಕರ್ನಾಟಕವು ನಾನಾ ಕ್ಷೇತ್ರಗಳಲ್ಲಿ 10.7 ಲಕ್ಷ ಕೋಟಿ ರೂ. ಹೂಡಿಕೆ ಆಕರ್ಷಿಸುವಲ್ಲಿ ಯಶಸ್ವಿಯಾಗಿದೆ'' ಎಂದು ಹೇಳಿದರು.

''ಉತ್ಪಾದನಾ ವಲಯದಲ್ಲಿ ದೇಶಾದ್ಯಂತ 34 ಲಕ್ಷ ಕೋಟಿ ರೂ. ಹೂಡಿಕೆ ಆಕರ್ಷಣೆಯಾಗಿದ್ದರೆ, ಕರ್ನಾಟವು 3.4 ಲಕ್ಷ ಕೋಟಿ ರೂ. (ಶೇ.10) ಹೂಡಿಕೆ ಸೆಳೆದಿದೆ. ಮಹಾರಾಷ್ಟ್ರವು ಶೇ.12.8ರಷ್ಟು ಹೂಡಿಕೆ ಆಕರ್ಷಿಸಿ ಪ್ರಥಮ ಸ್ಥಾನದಲ್ಲಿದ್ದರೆ, ಒಡಿಶಾ ಶೇ.12.7ರಷ್ಟು ಹೂಡಿಕೆ ಆಕರ್ಷಿಸಿ ಎರಡನೇ ಸ್ಥಾನದಲ್ಲಿದೆ'' ಎಂದು ತಿಳಿಸಿದರು.

''ಕರ್ನಾಟಕವು ಕಳೆದ ವರ್ಷ ಆಕರ್ಷಿಸಿದ ಒಟ್ಟು ಹೂಡಿಕೆಯಲ್ಲಿ ಉತ್ಪಾದನಾ ವಲಯ ಶೇ.32ರಷ್ಟು ಪಾಲು ಹೊಂದಿದೆ. ಜತೆಗೆ ಶೇ.68ರಷ್ಟು ಲೋಹ ಹಾಗೂ ಲೋಹದ ಉತ್ಪನ್ನಗಳ ತಯಾರಿಕೆ, ಶೇ.10ರಷ್ಟು ಕಟ್ಟಡ ನಿರ್ಮಾಣ ಸಾಮಗ್ರಿ, ಶೇ.8ರಷ್ಟು ರಾಸಾಯನಿಕ ಹಾಗೂ ರಾಸಾಯನಿಕ ಉತ್ಪನ್ನಗಳು, ಶೇ.4ರಷ್ಟು ಯಂತ್ರೋಪಕರಣ ಉತ್ಪಾದನೆ, ಶೇ.3.5ರಷ್ಟು ಆಹಾರ ಮತ್ತು ಕೃಷಿ ಸಂಬಂಧಿತ ಉತ್ಪನ್ನ ತಯಾರಿಕೆ ಹಾಗೂ ಶೇ.3.4ರಷ್ಟು ಸಾರಿಗೆ ಸಂಬಂಧಿತ ಉಪಕರಣಗಳ ಉತ್ಪಾದನೆಯಲ್ಲಿ ಪಾಲು ಹೊಂದಿದೆ'' ಎಂದು ಹೇಳಿದರು.

''ಕೈಗಾರಿಕೆಗಳ ಸಂಖ್ಯೆ ಏರಿಕೆ, ಸಾಮರ್ಥ್ಯದ ಗರಿಷ್ಠ ಬಳಕೆ, ಹೂಡಿಕೆ ಮೊತ್ತ, ರಸ್ತೆ ಸಂಪರ್ಕ ಜಾಲ ಇತರೆ ಕ್ಷೇತ್ರದಲ್ಲೂ ಸುಧಾರಣೆ ಸಾಧಿಸಿರುವುದು ಕಂಡುಬಂದಿದೆ. ಎಲ್ಲ ರಾಜ್ಯಗಳನ್ನು ಭೌಗೋಳಿಕ ಸ್ವರೂಪದ ಆಧಾರದ ಮೇಲೆ ಈಶಾನ್ಯ, ಹಿಮಾಲಯ ಹಾಗೂ ಮುಖ್ಯ ರಾಜ್ಯಗಳೆಂದು ವರ್ಗೀಕರಿಸಲಾಗಿತ್ತು. ಜತೆಗೆ ಪ್ರತಿಯೊಂದು ರಾಜ್ಯದ ಕೈಗಾರಿಕೆಗಳ ವಾರ್ಷಿಕ ಸಮೀಕ್ಷೆ, ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಅಧಿಕೃತ ವೆಬ್‌ಸೈಟ್‌ಗಳಲ್ಲಿ 2009-10ರಿಂದ 2014-15ನೇ ಸಾಲಿನ ಹಣಕಾಸು ವರ್ಷದ ವಿವರಗಳನ್ನು ಪರಿಗಣಿಸಲಾಗಿದೆ'' ಎಂದು ತಿಳಿಸಿದರು.

ಅಸೋಚಾಮ್ ರಾಜ್ಯ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಆರ್. ಶಿವಕುಮಾರ್ ಮಾತನಾಡಿ, ''ಉತ್ಪಾದನಾ ವಲಯದ ಹೂಡಿಕೆ ಅವಕಾಶಗಳಲ್ಲಿ ಕರ್ನಾಟಕ ಪ್ರಥಮ ಸ್ಥಾನದಲ್ಲಿದ್ದರೆ, ಹೂಡಿಕೆ ಆಕರ್ಷಣೆಯಲ್ಲಿ ಮೂರನೇ ಸ್ಥಾನದಲ್ಲಿದೆ. ಒಟ್ಟಾರೆ ಉತ್ಪಾದನಾ ಕ್ಷೇತ್ರದಲ್ಲಿ ಕರ್ನಾಟಕದ ಪ್ರಗತಿ ಆಶಾದಾಯಕವಾಗಿದೆ'' ಎಂದುಮೆಚ್ಚುಗೆ ವ್ಯಕ್ತಪಡಿಸಿದರು.